# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೮



**ಕೆ**ಳಗೆ ಬರೆದಿರುವ ಕಥೆಯಲ್ಲಿ ಶ್ರೀಮಾತೆಯವರು ಮಾಡಿದ ಕೆಲಸ ಹಾಗೂ ಅವರ ಮಾತುಗಳು ಗಮನಾರ್ಹವಾದುದು:

ಮಾಸ್ಟರ್ ಮಹಾಶಯ ತನ್ನ ವಿದ್ಯಾರ್ಥಿಯಾದ ವಿನೋದ ವಿಹಾರಿ ಸೋಮನನ್ನು ಶ್ರೀರಾಮಕೃಷ್ಣರ ಬಳಿಗೆ ಕರೆದುಕೊಂಡು ಹೋಗಿದ್ದ. ವಿನೋದ ವಿಹಾರಿಯದು ಬಹಳ ಎಳೆಯ ವಯಸ್ಸು. ಅವನ ಹೆಸರು 'ಶ್ರೀರಾಮಕೃಷ್ಣ ವಚನವೇದ'ದಲ್ಲೂ ಬರುತ್ತದೆ. ಅವನ ಮನೆ ಬಾಗ್‌ಬಜಾರಿನ ರಾಮಕಾಂತ ದಾಸ್ ಸ್ಟ್ರೀಟ್‌ನಲ್ಲಿತ್ತು.[೧] ಭಕ್ತರ ನಡುವೆ ಅವನ ಹೆಸರು 'ಪದ್ಮವಿನೋದ್' ಎಂದಾಗಿತ್ತು. ನಾವೆಲ್ಲ ಅವನನ್ನು ನೋಡಿದುದು ತೀರ ಇತ್ತೀಚೆಗೆ; ಅಲ್ಲಿಂದೀಚೆಗೆ ಅವನ ಬಗ್ಗೆ ನಾನು ಖಂಡಿತ ವಿವರಿಸಬಲ್ಲೆ. ಆದರೆ ಅದಕ್ಕೂ ಹಿಂದೆ ಅವನ ಜೀವನದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಅವನ್ನು ಹೇಳದೆ ಅವನ ಅಲೌಕಿಕ ಜೀವನವನ್ನು ಸರಿಯಾಗಿ ತಿಳಿದುಕೊಳ್ಳಲಾಗದು. ತಾರುಣ್ಯದಲ್ಲೇ ಅವನು ಥಿಯೇಟರಿಗೆ ಸೇರಿಕೊಂಡಿದ್ದ; ಚೆನ್ನಾಗಿ ಅಭಿನಯ ಮಾಡುತ್ತಿದ್ದ. ಅವನು ಎಲ್ಲ ಪಾತ್ರಗಳನ್ನೂ ಚೆನ್ನಾಗಿ ಅಭಿನಯಿಸುತ್ತಿದ್ದ. ಅವುಗಳಲ್ಲಿ ಒಂದು ಪಾತ್ರದ ಬಗ್ಗೆ ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಗಿರೀಶಚಂದ್ರನ 'ಪ್ರಫುಲ್ಲ' ಎಂಬ ನಾಟಕದಲ್ಲಿ ಅವನು ಮುಲುಕ್‌ಚಂದ್ ಧುಧುರಿಯಾನ ಪಾತ್ರದೊಂದಿಗೆ ರಂಗಕ್ಕೆ ಬರುತ್ತಿದ್ದ. ಅದನ್ನು ಅವನು ಎಷ್ಟೊಂದು ಚೆನ್ನಾಗಿ ಅಭಿನಯಿಸಿ ತೋರಿಸುತ್ತಿದ್ದನೆಂದರೆ, ಇಂದಿನವರೆಗೂ ಅವನಿಗೆ ಸರಿಸಮಾನವಾಗಿ ಅದನ್ನು ನಟಿಸಿದವರು ಇನ್ನೊಬ್ಬರಿಲ್ಲ. ಈ ವಿಷಯವನ್ನು ಅವಿನಾಶಚಂದ್ರ ಗಂಗೋಪಾಧ್ಯಾಯ ಬರೆದ 'ಗಿರೀಶಚಂದ್ರ' ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಆಗಿನ ಕಾಲದಲ್ಲಿ ಥಿಯೇಟರಿಗೆ ಸೇರಿದವರಲ್ಲಿ ಬಹುಪಾಲು ಮಂದಿ ಎಷ್ಟು ಗುಣಗಳಿಂದ ಕೂಡಿದ್ದರೋ, ಅಷ್ಟೇ ದೋಷಗಳೂ ಅವರನ್ನು ಬಂದು ಸೇರುತ್ತಿದ್ದವು. ನಮ್ಮ ಪದ್ಮವಿನೋದನೂ ಕೂಡ ಚೆನ್ನಾಗಿ ಮದ್ಯಪಾನ ಮಾಡುವ ಅಭ್ಯಾಸ ಮಾಡಿಕೊಂಡ. ನಾನು ಅವನನ್ನು ನೋಡುವಾಗ ಆತ ಈ ವ್ಯಸನದಲ್ಲೇ ಯಾವಾಗಲೂ ಮುಳುಗಿ, ಮೈಮರೆತು ಬಿದ್ದುಕೊಂಡಿರುತ್ತಿದ್ದ. ಅವನು ಆಗಾಗ ಬಲರಾಮ ಬಾಬುವಿನ ಮನೆಯಲ್ಲಿ ಶರತ್ ಮಹಾರಾಜರ ಬಳಿಗೆ ಬಂದು, ಅವರನ್ನು ನೋಡಿ ಹೋಗುತ್ತಿದ್ದ ಹಾಗೂ ಅವರನ್ನು 'ದೋಸ್ತ್' ಎಂದು ಕರೆಯುತ್ತಿದ್ದ ಎಂದು ಕೇಳಿದ್ದೆ.

ಒಂದು ದಿನ ರಾತ್ರಿ ಹೊತ್ತು, ಆಗ ಎರಡನೇ ಪ್ರಹರಕ್ಕಿಂತ ಕಡಿಮೆಯೇನಲ್ಲ. ನಾವು ಬಾಗ್‌ಬಜಾರ್ ಸ್ಟ್ರೀಟ್‌ನ ಮನೆಯಲ್ಲಿ[೨] ನಿದ್ರಿಸುತ್ತಿದ್ದೆವು. ಹಠಾತ್ತನೆ, ಮುಚ್ಚಿದ್ದ ಕಿಟಕಿಯ ಮೇಲೆ ಬಡಿದಂತೆ ಶಬ್ದವಾಯಿತು. 'ದೋಸ್ತ್, ದೋಸ್ತ್' ಎಂಬ ಸದ್ದು ಕೇಳಿಬಂದು ನಮಗೆ ನಿದ್ರಾಭಂಗವಾಯಿತು. ಪದ್ಮವಿನೋದ ಬಂದಿದ್ದಾನೆ ಎಂದು ತಿಳಿದ ಶರತ್ ಮಹಾರಾಜ್, ನಮ್ಮ ಬಳಿ ಪಿಸುಗುಟ್ಟಿ, ಅವನಿಗೆ ಉತ್ತರ ಕೊಡಬಾರದು ಅಥವಾ ಬಾಗಿಲು ತೆಗೆಯಕೂಡದು ಎಂದು ಹೇಳಿದರು. ಕುಡಿದ ಮತ್ತಿನಲ್ಲಿ ಅವನು ಕೂಗಾಡಿದರೆ, ಅದರಿಂದ ಮೇಲಂತಸ್ತಿನಲ್ಲಿ ನಿದ್ರಿಸುತ್ತಿದ್ದ ಶ್ರೀಮಾತೆಯವರ ನಿದ್ರೆಗೆ ಭಂಗವುಂಟಾದೀತು ಎಂದು. ಕೆಲವು ಬಾರಿ ಕರೆದು, ಅನಂತರ ಪದ್ಮವಿನೋದ ಹೇಳಿದ, ''ಅಲ್ಲೋ, ನಾನು

೧. ಬಲರಾಮ ಮಂದಿರ ಈ ರಸ್ತೆಯಲ್ಲೇ ಇದೆ. *(-ಸಂ)*

೨. ೨/೧, ಬಾಗ್‌ಬಜಾರ್ ಸ್ಟ್ರೀಟಿನ ಸಮೀಪ. ಶ್ರೀಮಾತೆ ಅಲ್ಲಿ ಸುಮಾರು ಒಂದೂವರೆ ವರ್ಷ ವಾಸವಾಗಿದ್ದರು. *(-ಸಂ)*

ರಾತ್ರಿ ಹೊತ್ತು ಬಂದೆ, ನೀನು ದೋಸ್ತ್, ಎದ್ದು ಬರಲೂ ಇಲ್ಲ, ಉತ್ತರ ಕೊಡಲೂ ಇಲ್ಲ!'' ಎನ್ನುತ್ತ ಹೊರಟುಹೋದ.

ಎರಡನೇ ಬಾರಿ ಅವನು ಬಂದಾಗ ರಾತ್ರಿ ಸುಮಾರು ಮೂರನೇ ಪ್ರಹರವಾಗಿತ್ತು. ಹಿಂದಿನ ಸಲದ ಹಾಗೆ ಈ ಬಾರಿ ಕೂಡ ನಮ್ಮಿಂದ ಉತ್ತರ ಸಿಗದ ಕಾರಣ, ಅವನು ರಸ್ತೆಯಲ್ಲಿ ನಿಂತು ಶ್ರೀಮಾತೆಯವರನ್ನು ಸಂಬೋಧಿಸಿ ಹೇಳತೊಡಗಿದ, ''ಅಮ್ಮಾ, ನಿನ್ನ ಮಗ ಬಂದಿದ್ದಾನೆ, ಏಳಮ್ಮಾ.'' ಹೀಗೆಂದವನು, ಕುಡಿದ ಮತ್ತಿನಿಂದ (ಉತ್ತಮ ಸ್ವರದಲ್ಲಿ) ಹಾಡತೊಡಗಿದ:

ಏಳು ಕರುಣಾಮಯಿ, ಗುಡಿಸಿಲಿನ ಬಾಗಿಲನು ತೆರೆ,
ಕತ್ತಲಲಿ ನಡೆಯಲಾರೆ, ಎದೆ ಕಂಪಿಸುತಿದೆ, ತಡೆಯೆ;
ಮಗನ ಹೊರಗಡೆಯಿಟ್ಟು, ಅಂತಃಪುರದಿ
ನೀನು ಸುಖವಾಗಿರುವೆ,
(ನಾ) ಕರೆಯುತಿಹೆ ಅಮ್ಮಾ ಅಮ್ಮಾ ಎಂದು,
ನಿನ್ನ ನಿದ್ರೆ ಹರಿಯದೆ?

*('ಉಠೋಗೋ ಕರುಣಾಮಯಿ, ಖೋಲೋಗೋ ಕುಟೀರ ದ್ವಾರ್')*

ಮೊದಲ ಸಾಲನ್ನು ಅವನು ಹಾಡುತ್ತಿದ್ದಂತೆಯೇ ಮೇಲಂತಸ್ತಿನಲ್ಲಿ ಶ್ರೀಮಾತೆಯವರ ಕೋಣೆಯ ಕಿಟಕಿಯ ಒಂದು ಬಾಗಿಲು ತೆರೆಯುವ ಶಬ್ದ ಕೇಳಿ ಬಂತು. ಆಗ ಶರತ್ ಮಹಾರಾಜ್ ''ಅಯ್ಯೋ, ಅವನು ಶ್ರೀಮಾತೆಯವರನ್ನು ಎಬ್ಬಿಸಿಬಿಟ್ಟ!'' ಎಂದರು. ಆ ಹಾಡಿನ ನಾಲ್ಕನೇ ಸಾಲನ್ನು ಹಾಡುವಷ್ಟರಲ್ಲಿ ಶ್ರೀಮಾತೆಯವರ ಕಿಟಕಿಯ ಬಾಗಿಲು ಸಂಪೂರ್ಣವಾಗಿ ತೆರೆಯಿತು. ನಾವು ಕುತೂಹಲದಿಂದ ನಮ್ಮ ಕೋಣೆಯ ಕಿಟಕಿಯ ಒಂದು ಬಾಗಿಲನ್ನು ಮೆಲ್ಲನೆ ತೆರೆದು, ಗ್ಯಾಸ್‌ಲೈಟಿನ ಬೆಳಕಿನಲ್ಲಿ ನೋಡುತ್ತ ನಿಂತೆವು. ಶ್ರೀಮಾತೆಯವರು ಕಿಟಕಿ ತೆರೆದ ಶಬ್ದ ಕೇಳಿ ಪದ್ಮವಿನೋದ, ''ಅಮ್ಮಾ ಎದ್ದುಬಿಟ್ಟೆಯಾ? ಮಗನ ಕರೆ ನಿನ್ನ ಕಿವಿಗೆ ಕೇಳಿಸಿತೆ? ಎದ್ದಿದ್ದರೆ ನನ್ನ ಪ್ರಣಾಮ ಸ್ವೀಕರಿಸು'' ಎನ್ನುತ್ತ ರಸ್ತೆಯಲ್ಲಿ ಉರುಳಾಡಿದ. ಮತ್ತೆ ಅಲ್ಲಿಂದೆದ್ದು, ಆ ಸ್ಥಳದ ಧೂಳನ್ನು ಹಣೆಗೆ ಮೆತ್ತಿಕೊಂಡು ಅಲ್ಲಿಂದ ಹೊರಟುಹೋದ. ಅವನು ಸುಮ್ಮನೆ ಹೋಗಲಿಲ್ಲ, ಮತ್ತೆ ಲಯಬದ್ಧವಾಗಿ ಹಾಡುತ್ತ ಹೋದ. ನಿಶ್ಶಬ್ದವಾದ ಆ ರಾತ್ರಿಯಲ್ಲಿ ಬಹಳ ದೂರದಿಂದಲೂ ನಮ್ಮ ಕಿವಿಗೆ ಅವನ ಹಾಡು ಕೇಳಿ ಬರುತ್ತಿತ್ತು:

ಯತ್ನದಿ ನಿನ್ನೆದೆಯಲಿರಿಸು ಜಗನ್ಮಾತೆ ಶ್ಯಾಮೆಯನು
(ಮನವೇ) ನೀನು ನೋಡು, ನಾ ನೋಡುವೆ
ಬೇರಾರೂ ನೋಡದಿರಲಿ ॥
ನಾ ನೋಡುವೆ, 'ದೋಸ್ತ್' ಮಾತ್ರ ನೋಡದಿರಲಿ ॥

ಶ್ರೀಮಾತೆಯವರ ಕಿಟಕಿ ಈಗ ಮುಚ್ಚಲ್ಪಟ್ಟಿತು. ನಾವು ಕೂಡ ಅವನ, ವಿಷಯವನ್ನೇ ಚಿಂತಿಸುತ್ತ ಮಲಗಿ ನಿದ್ದೆ ಹೋದೆವು.

ಮರುದಿನ ಬೆಳಿಗ್ಗೆ ಶ್ರೀಮಾತೆಯವರ ಬಳಿಗೆ ಹೋದಾಗ ಅವರು ಕೇಳಿದರು, ''ಯಾರು ಆ ಹುಡುಗ?'' ಅವನ ಕುರಿತಾಗಿ ಎಲ್ಲ ವಿಷಯವನ್ನೂ ಕೇಳಿ ತಿಳಿದ ನಂತರ ಹೇಳಿದರು, ''ನೋಡಿದೆಯಾ? ಅವನ ಬುದ್ಧಿ ಎಷ್ಟು ಚುರುಕಾಗಿದೆ!''

ಇನ್ನೊಂದು ದಿನ ಇದೇರೀತಿ ಪದ್ಮವಿನೋದ ನಡುರಾತ್ರಿ ಹೊತ್ತು ಬಂದಿದ್ದ. ಅವನು ಯಾವಾಗ ಬಂದಿದ್ದನೋ ನಮಗೆ ಗೊತ್ತಾಗಲಿಲ್ಲ, ನಾವು ನಿದ್ರಿಸುತ್ತಿದ್ದೆವು. ಅವನ ಹಾಡಿನಿಂದ ನಾವು ನಿದ್ದೆ ಬಿಟ್ಟೆದ್ದೆವು. ನಿಧಾನವಾಗಿ ಕಿಟಕಿ ತೆರೆದು ನೋಡಿದೆ, ಹಿಂದಿನಂತೆಯೇ ಅವನು ರಸ್ತೆಯಲ್ಲಿ ನಿಂತು ಶ್ರೀಮಾತೆಯವರ ಕಡೆಗೆ ನೋಡುತ್ತ ಹಾಡುತ್ತಿದ್ದ:

ಮಸಣವೇ ನಿನಗೆ ಪ್ರಿಯವೆಂದು ತಿಳಿದು
ಮಸಣವಾಗಿಸಿದೆ ನಾನೆನ್ನ ಹೃದಯವನು,
ಮಸಣದಲೆ ನೆಲೆಸಿರುವ ತಾಯೆ ಶ್ಯಾಮಾ,
ನರ್ತಿಸುವೆ ನೀನಲ್ಲೆ ಅನವರತ ಎಂದು.

ನನ್ನ ಚಿತ್ತದಲಿ ಬೇರೇನೇನು ಉಳಿದಿಲ್ಲ,
ಹಗಲಿರುಳು ಚಿತೆಯಾಗಿ ಧಗಧಗಿಸುತಿದೆ ಜ್ವಾಲೆ;
ಸುತ್ತಲೂ ಚಿತಾಭಸ್ಮ ಚೆಲ್ಲಾಡಿ ಕಾದಿರುವೆ
ಎಂದಾದರೂ ನೀನು ಬಳಿಗೆ ಬರುವೆಯೊ ಎನುತ.

ಪದತಲದಿ ಮೃತ್ಯುಂಜಯನ ಕೆಡವಿ ತುಳಿದಿರುವೆ,
ಆ ಮಹಾಕಾಲನನೆ ನೆಲವಾಗಿಸಿ;
ತಾಳಲಯವಿರಲು ನಲಿಯಮ್ಮ ನೀ ಕೊನೆಯಿರದೆ
ನೋಡುವೆನು ನಾ ನಿನ್ನ, ಕಣ್ಣ ಮುಚ್ಚಿ.

(ಮೂಲ ಬಂಗಾಳಿ : *ಶ್ಮಶಾನ್ ಭಾಲೋಬಾಸಿಸ್ ಬೋಲೇ.. )*

ಹಾಡಿನ ಪ್ರಭಾವದಿಂದ ಹಿಂದಿನಂತೆಯೇ ಶ್ರೀಮಾತೆಯವರ ಕಿಟಕಿ ತೆರೆಯುವ ಶಬ್ದ ಕೇಳಿಬಂತು. ಶ್ರೀಮಾತೆಯವರ ದರ್ಶನ ಪಡೆದ ಮೇಲೆ ಅವನು ಮೊದಲಿನಂತೆ ರಸ್ತೆಯ ಮೇಲೆ ಉರುಳಾಡಿ, ಹಿಂದಿನಂತೆಯೇ ಹಾಡುತ್ತಾ ಹೋದ; ಮತ್ತೇನೂ ಗದ್ದಲವೆಬ್ಬಿಸಲಿಲ್ಲ.

ಮರುದಿನ ಬೆಳಿಗ್ಗೆ ಶ್ರೀಮಾತೆ, ''ನೋಡಿದೆಯಾ? ಅವನ ಬುದ್ಧಿ ಎಷ್ಟು ಚುರುಕಾಗಿದೆ!'' ಎಂದರು. ಅದಕ್ಕೆ ನಾನು, ''ಅವನು ನಿಮ್ಮ ನಿದ್ರೆಯನ್ನು ಹಾಳು ಮಾಡಿದ!'' ಎಂದೆ. ಆಗ ಶ್ರೀಮಾತೆ, ''ಅದು ಹೋಗಲಿ, ಮಗೂ. ಅವನು ಕರೆಯುತ್ತಿದ್ದಾಗ ನನಗೆ ಸುಮ್ಮನಿರಲಾಗಲಿಲ್ಲ. ಅದಕ್ಕೇ ನಾನು ತೋರಿಸಿಕೊಟ್ಟೆ'' ಎಂದರು.

ಪದ್ಮವಿನೋದ ಮತ್ತೆ ಬರಲಿಲ್ಲ; ಶ್ರೀಮಾತೆಯವರ ನಿದ್ರೆಗೂ ಭಂಗವುಂಟಾಗಲಿಲ್ಲ. ನಮಗೂ ಕುತೂಹಲದಿಂದ ಅವರ ನಡುವಿನ ಸಂಬಂಧವನ್ನು ಗಮನಿಸಲಾಗಲಿಲ್ಲ. ಹೀಗೆಯೇ ಬಹಳ ದಿನ ಕಳೆಯಿತು. ಮುಂದೊಂದು ದಿನ ಬೆಳಗಿನ ಹೊತ್ತು ಅವನ ಮಗ (ವಯಸ್ಸು ಹನ್ನೆರಡು-ಹದಿಮೂರು) ಶರತ್ ಮಹಾರಾಜರ ಬಳಿಗೆ ಬಂದು, ಅವರನ್ನು ಕರೆದುಕೊಂಡು ಹೋದ.

ಶರತ್ ಮಹಾರಾಜರು ಮರಳಿ ಬಂದಾಗ ಸ್ನೇಹಿತ ಡಾಕ್ಟರ್ ಕಂಜೀಲಾಲ್ ನಮ್ಮ ಬಳಿ ಕುಳಿತಿದ್ದ. ಶರತ್ ಮಹಾರಾಜರು ಸೇವೆಗೆ ಸಿದ್ಧರಾಗಲು ನಮಗೆ ಆದೇಶ ನೀಡಿದರು. ಯಾಕೋ ತಿಳಿಯದು, ಪದ್ಮವಿನೋದನಿಗೆ ಮರಣಾಂತಿಕ ಕಾಯಿಲೆ ಉಂಟಾಗಿತ್ತು. ಅವನು ಜಲೋದರ (dropsy) ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ. ಈ ವಿಷಯವನ್ನು ಕೇಳಿ ತಟ್ಟನೆ ಎದ್ದು ನಿಂತ ಸ್ನೇಹಿತ; ಅವನಿಗೆ ಸಹಜ ಸ್ವಭಾವವಾಗಿದ್ದ ಸೇವಾಧರ್ಮ ಕೆಲಸ ಮಾಡಿತು. ನಮ್ಮೊಂದಿಗೆ ಅವನು ಹಾಸಿಗೆ ಹಿಡಿದು ಮಲಗಿದ್ದ ರೋಗಿಯ ಬಳಿಗೆ ಹೊರಟ.

ರೋಗಿಯನ್ನು ನೋಡಿದ ಡಾಕ್ಟರ್, ಪ್ರಾಣಧನ ಬಸುವಿನ ಮೂಲಕ ಹೊಟ್ಟೆಗೆ ತೂತು ಕೊರೆದು (‘ಟ್ಯಾಪ್’ ಮಾಡಿ) ಹೊಟ್ಟೆಯಲ್ಲಿದ್ದ ನೀರನ್ನು ಹೊರ ಹಾಕಿದ. ರೋಗಿ ನಿಟ್ಟುಸಿರು ಬಿಟ್ಟು ಉಳಿದುಕೊಂಡ. ಆದರೆ, ‘ಲಿಖಿತಮಿಹ ಲಲಾಟೇ ಪ್ರೋಜ್ಝಿತುಂ ಕಃ ಸಮರ್ಥಃ?’ – ಹಣೆಬರಹವನ್ನು ಅಳಿಸಲು ಸಮರ್ಥರಾರು? ರೋಗಿಯು ಮಲಗಿಕೊಂಡೇ ವಾಮಮಾರ್ಗದಿಂದ ಮದ್ಯ ಸಂಗ್ರಹ ಮಾಡುವುದನ್ನು ಬಿಡಲಿಲ್ಲ. ಅದರ ಪರಿಣಾಮವಾಗಿ ಮತ್ತೆ ಎರಡು ವಾರಗಳಲ್ಲಿ ಮೊದಲಿನ ಅವಸ್ಥೆಯೇ ಬಂದೊದಗಿತು. ಮತ್ತೆ ಸ್ನೇಹಿತ ಡಾಕ್ಟರ್‌ನ ದಯೆಯಿಂದ ‘ಟ್ಯಾಪ್’ ಮಾಡಲಾಯಿತು. ಶಸ್ತ್ರಚಿಕಿತ್ಸೆಯಿಲ್ಲದೆ ಬೇರೆ ದಾರಿಯಿಲ್ಲವೆಂದು ಡಾಕ್ಟರರು ಹೇಳಿದರು. ಆಸ್ಪತ್ರೆಗೆ ಹೋಗುವ ವಿಷಯವಾಗಿ ರೋಗಿ ಕೂಡ ಅತ್ಯಂತ ಅವಸರ ಮಾಡಿದ.

ನಾನು ಹೇಳುತ್ತಿರುವ ಘಟನೆ ನಡೆದಾಗ, ಕಲ್ಕತ್ತೆಯಲ್ಲಿ ಜಲೋದರ ಕಾಯಿಲೆಗೆ ಶಸ್ತ್ರಚಿಕಿತ್ಸೆ ಮಾಡಲು ಎಲ್ಲರಿಗಿಂತ ಸಮರ್ಥನಾದ ಡಾಕ್ಟರ್ ಬ್ರಾಯಿನ್ ಸಾಹೇಬ್ ಅತ್ಯಂತ ಪರಿಣಿತನೆಂದು ಬಹಳ ಪ್ರಖ್ಯಾತನಾಗಿದ್ದ. ಅವನು ಭವಾನೀಪುರದ ಶಂಭುನಾಥ ಪಂಡಿತರ ಆಸ್ಪತ್ರೆಯಲ್ಲಿ ರೋಗಿಗಳನ್ನು ಪರೀಕ್ಷೆ ಮಾಡುತ್ತಿದ್ದ. ನಮ್ಮ ರೋಗಿಯನ್ನು ಅಲ್ಲಿ ಒಂದು ಪ್ರತ್ಯೇಕ ಕೋಣೆಗೆ ವರ್ಗಾಯಿಸಲಾಯಿತು. ಸಾಹೇಬ ಪ್ರತಿದಿನವೂ ರೋಗಿಯನ್ನು ನೋಡುತ್ತಿದ್ದ, ಆದರೆ ನಮಗೇನೂ ಹೇಳುತ್ತಿರಲಿಲ್ಲ. ನಮ್ಮ ಸ್ನೇಹಿತನನ್ನು ಪ್ರತ್ಯೇಕ ಕರೆದು ಏನೋ ಹೇಳುತ್ತಿದ್ದ; ಆದರೆ ಅದನ್ನು ನಮಗೆ ಹೇಳದಂತೆ ನಿಷೇಧಿಸಿದ್ದ. ಹೀಗೆ ಎರಡು ದಿನ ಕಳೆಯಿತು. ಅತ್ತ ರೋಗಿ ಶಸ್ತ್ರಚಿಕಿತ್ಸೆಗೋಸ್ಕರ ಅವಸರ ಮಾಡುತ್ತಿದ್ದ. ಮೂರನೇ ದಿನ ಸಾಹೇಬ ರೋಗಿಯನ್ನು ನೋಡಲು ಹೋದಾಗ, ರೋಗಿ ಕಷ್ಟ ಸಹಿಸಲಾಗದೆ ಆತನಿಗೆ ಹೇಳಿದ, ‘‘ನಾನು ಆಪರೇಷನ್ ಮಾಡಲು ಹೇಳುತ್ತಿದ್ದೇನೆ. ನೀವೇಕೆ ಹಿಂದೆ ಮುಂದೆ ನೋಡುತ್ತಿದ್ದೀರಿ? ನೀವು ಇಂಗ್ಲೀಷ್ ಸಾಹೇಬರೆಂದು ಕೇಳಿದ್ದೆ, ಭಾರೀ ಧೈರ್ಯಶಾಲಿ ಅಂತ. ಆದರೆ ಈಗ ನೋಡಿದರೆ ನೀವು ಬೇರೆ ಥರ.’’ ಸಾಹೇಬನಿಗೆ ರೋಗಿಯ ಮಾತುಗಳನ್ನು—ವಿಶೇಷವಾಗಿ ಕೊನೆಯ ಮಾತನ್ನು ಸಹಿಸಲಾಗದೆ, ಮರುದಿನ ಬೆಳಗ್ಗೆಯೇ ಅವನ ಶಸ್ತ್ರಚಿಕಿತ್ಸೆಗೆ ಆದೇಶ ನೀಡಿದ.

ಸೂಕ್ತ ಸಮಯದಲ್ಲಿ ಶಸ್ತ್ರಚಿಕಿತ್ಸೆಯ ಕೋಣೆಗೆ ರೋಗಿಯನ್ನು ಕರೆದೊಯ್ದರು. ಸ್ನೇಹಿತ ಡಾಕ್ಟರನ ವ್ಯವಸ್ಥೆಯಿಂದಾಗಿ, ನಾನು ಡಾಕ್ಟರ್ ಅಲ್ಲದಿದ್ದರೂ ಕೂಡ ನನಗೆ ಪ್ರವೇಶ ದೊರಕಿತು. ಸಾಹೇಬನ ಶಸ್ತ್ರಚಿಕಿತ್ಸೆಯನ್ನು ನೋಡಲು ಡಾಕ್ಟರ್ ಹಾಜರಾ ಹಾಗೂ ಕಲ್ಕತ್ತೆಯ ಕೆಲವು ಮಂದಿ ಹೊಸ ಡಾಕ್ಟರರೂ ಬಂದಿದ್ದರು. ಡಾಕ್ಟರ್ ಹಾಜರಾ ರೋಗಿಗೆ ಅರಿವಳಿಕೆ ನೀಡಿ ಪ್ರಜ್ಞೆ ತಪ್ಪಿಸಿದರು, ಹಾಗೂ ನಾಡಿ ಹಿಡಿದು ಕುಳಿತರು. ಡಾಕ್ಟರ್ ಕಂಜೀಲಾಲ್, ಸಾಹೇಬನ ಸಹಾಯಕ್ಕೆ ನಿಂತ. ಹೊಟ್ಟೆಯನ್ನು ಕೊಯ್ದು ಆ ಸಾಹೇಬ ಡಾಕ್ಟರ್ ಹೇಳಿದ, ‘‘ನನ್ನ ಕೈಲಿ ಈ ರೋಗದ ೨೨ನೇ ರೋಗಿ ಈತ. ೨೧ ಮಂದಿ ಆರೋಗ್ಯವಂತರಾಗಿ ಹೋದರು. ಆದರೆ ಈ ಬಾರಿ ಅದು ವಿರುದ್ಧವಾದೀತು. ನಾಳಗಳೆಲ್ಲ ಕೊಳೆತು ಹೋಗಿವೆ.’’

ಶಸ್ತ್ರಚಿಕಿತ್ಸೆಯ ನಂತರ ರೋಗಿಯನ್ನು ಅವನ ಕೋಣೆಗೆ ಕರೆತರಲಾಯಿತು. ಅವನಿಗೆ ಕಂಬಳಿ ಹೊದಿಸಿ, ನಾಲ್ಕೂ ಕಡೆ ಬಿಸಿನೀರು ತುಂಬಿದ ಬಾಟಲಿಗಳನ್ನು ಇಡಲಾಯಿತು. ಕೈಕಾಲುಗಳನ್ನು ಕಟ್ಟಿಹಾಕಲು ಸಿದ್ಧತೆ ನಡೆಸಿದಾಗ ನಾನೆಂದೆ, ‘‘ಏನೂ ಭಯವಿಲ್ಲ, ಅವನನ್ನು ಕಟ್ಟಿಹಾಕಬೇಡಿ. ಅವನ ಭಾರವನ್ನು ನಾನು ವಹಿಸಿಕೊಂಡಿದ್ದೇನೆ. ಅವನನ್ನು ಅಲುಗಾಡಲು ಬಿಡಲಾರೆ.’’ ಆಗ ನರ್ಸುಗಳು ಬಿಟ್ಟುಕೊಟ್ಟರು. ಅನಂತರ ಡಾಕ್ಟರ್ ಹಾಜರಾ ಬಂದು ಹೇಳಿದರು, ‘‘ನೀವು ರೋಗಿಗೆ ಎಳ್ಳಷ್ಟೂ ತಿನ್ನಲು ಕೊಡುವುದಿಲ್ಲ ಅಂತ ಮಾತುಕೊಟ್ಟರೆ ಮಾತ್ರ ನಿಮ್ಮನ್ನು ರೋಗಿಯ ಸಮೀಪ ಇರಲು ಬಿಡಬಹುದು. ಇಪ್ಪತ್ತನಾಲ್ಕು ಗಂಟೆಯ ತನಕ ಸ್ವಲ್ಪ ಸ್ವಲ್ಪ ಬಿಸಿನೀರನ್ನು ಮಾತ್ರ ಕೊಡಬಹುದು. ಅದನ್ನೂ ಕೂಡ ನರ್ಸ್‌ಗಳು ಕೊಡುತ್ತಾರೆ. ನೀವು ಕೊಡಬೇಡಿ.’’ ಅಂತೆಯೇ ನಾನು ಮಾತುಕೊಟ್ಟೆ.

ಆದರೆ ರೋಗಿಗೆ ಪ್ರಜ್ಞೆ ಮರಳಿದ ಕೂಡಲೇ ಅವನು ದ್ರಾಕ್ಷಿ ತಿನ್ನಬೇಕೆಂದು ನನ್ನನ್ನು ಪೀಡಿಸತೊಡಗಿದ. ನಾನೂ ಕೊಡಲಾರೆ, ಅವನೂ ಬಿಡುತ್ತಿಲ್ಲ. ಕೊನೆಯ ಮರ್ಮಭೇದಕ ಸ್ವರದಿಂದ ಅವನು ಕೈಜೋಡಿಸಿ ಒಂದೇ ಒಂದು ದ್ರಾಕ್ಷಿಗೋಸ್ಕರ ಪ್ರಾರ್ಥಿಸಿದ. ಆ ಕಾತರದ ಧ್ವನಿ, ಆ ಕರುಣಾಮಯ ಹಾಗೂ ಹೃದಯ ಸ್ಪರ್ಶಿಯಾದ ಪ್ರಾರ್ಥನೆ ಈ ಇಳಿವಯಸ್ಸಿನಲ್ಲೂ ಕಲ್ಲಿನ ಮೇಲೆ ಕೊರೆದಂತೆ ನನ್ನೆದೆಯಲ್ಲಿ ಧಗಧಗಿಸುತ್ತಿದೆ; ನನಗೆ ನಾನೇ ಧಿಕ್ಕಾರ ಕೂಗುತ್ತಿದ್ದೇನೆ, ಅದೇಕೆ ಕೊಡಲಿಲ್ಲವೆಂದು. ಅವನು ಎಷ್ಟು ಬಾರಿ ಹೇಳಿದ, ‘‘ನೀನೆಂಥ ಸ್ನೇಹಿತ? ಒಂದೇ ಒಂದು ದ್ರಾಕ್ಷಿ ಬೇಕೆಂದೆ, ನಾನು ಇನ್ನೆಂದೂ ಅದನ್ನು ಕೇಳಲು ಬರಲಾರೆ – ಆದರೂ ನೀನು ಕೊಡಲಾರೆಯಾ?’’ ನಾನೆಂಥ ನಿರ್ದಯಿ! ಡಾಕ್ಟರರ ಆದೇಶವನ್ನು ಪಾಲಿಸುವುದಕ್ಕಾಗಿ ಅದನ್ನೂ ಕೊಡದೆ ಹೋದೆನಲ್ಲ!

ಅದು ನಿಜಕ್ಕೂ ಭಯಾನಕ ದಿನ! ರೋಗಿಯನ್ನು ಬಿಟ್ಟು ‘ಉದ್ಬೋಧನ’ಕ್ಕೆ ಊಟಕ್ಕೆ ಬರಲಾಗಲಿಲ್ಲ. ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ರೋಗಿಯ ಭಾವಮೈದುನ ಅವನನ್ನು ನೋಡಲು ಬಂದ. ನನಗೆ ತುಸು ಊಟ ತಂದುಕೊಟ್ಟ ಹಾಗೂ

ಒಬ್ಬನೇ ಸುಮ್ಮನೆ ಕುಳಿತಿರಲು ಕಷ್ಟವಾದೀತೆಂದು ಭಾವಿಸಿ 'ಕಥಾಮೃತ'('ವಚನವೇದ'ದ ಮೂಲ ಬಂಗಾಳಿ ಗ್ರಂಥ)ವನ್ನು ಕೊಟ್ಟು ಹೋದ. ಹೇಗೋ ಆ ದಿನವೆಲ್ಲ ಕಳೆಯಿತು; ರಾತ್ರಿಹೊತ್ತು ಮೊದಲ ಪ್ರಹರವೂ ಕಳೆಯಿತು.

ರಾತ್ರಿ ಒಂದು ಗಂಟೆಯ ಹೊತ್ತಿಗೆ ರೋಗಿ ಹೇಳಿದ: ''ಇನ್ನು ನಾನು ಬದುಕಲಾರೆ. ಒಂದೇ ಒಂದು ದ್ರಾಕ್ಷಿಹಣ್ಣು ಕೇಳಿದೆ, ನೀನು ಕೊಡಲಿಲ್ಲ, ಅದನ್ನು ಕೊಡದೆ ಒಳ್ಳೆಯದನ್ನೇ ಮಾಡಿದೆ. ಇನ್ನು ನನಗೆ ಬೇಡ. ಈಗ ಒಂದು ಕೆಲಸ ಮಾಡು, ದೋಸ್ತ್! ಠಾಕೂರರ ಮಾತನ್ನು ಕೇಳಬೇಕು. ನನ್ನ ಕೊನೆ ಹತ್ತಿರ ಬಂದಿದೆ.''

ನನ್ನ ಕೈಯಲ್ಲಿದ್ದ 'ಕಥಾಮೃತ' ಪುಸ್ತಕ ಮುಚ್ಚಿತ್ತು. ಅದನ್ನು ತೆರೆದೆ. ತೆರೆದೊಡನೆಯೇ ಎಂಥ ದೃಶ್ಯ ಬಂದಿತೆಂದರೆ, ಅದರಲ್ಲಿ ಅವನ ಹೆಸರೇ ಇತ್ತು. ಓದತೊಡಗಿದೆ. ಕೇಳುತ್ತ ಕೇಳುತ್ತ ಅವನ ಎರಡೂ ಕಣ್ಣುಗಳ ಅಂಚಿನಲ್ಲಿ ನೀರ ಹನಿ ಉದುರಿದವು. ಒಂದೇ ಬಾರಿ ಬಾಯಿಯಿಂದ 'ರಾಮಕೃಷ್ಣ' ಎಂದು ಉಚ್ಚರಿಸಿದ – ತನ್ನ ಇಹಲೀಲೆ ಮುಕ್ತಾಯಗೊಳಿಸಿದ. 'ಪದ್ಮವಿನೋದ' ಎಂಬ ಹೆಸರು ಧರೆಯಲ್ಲಿ ಒರೆಸಲ್ಪಟ್ಟಿತು.

ಮರುದಿನ ಬೆಳಿಗ್ಗೆ ಅವನ ಬಂಧು ಜನರು ವಿಷಯ ತಿಳಿದು ಬರಲಾರಂಭಿಸಿದರು. ಕೇವುಡಾತಲಾದ ಘಾಟಿನಲ್ಲಿ ಅವನ ಅಂತ್ಯ ಸಂಸ್ಕಾರ ನಡೆಯಿತು.

ಮಧ್ಯಾಹ್ನ ನಾನು 'ಉದ್ಬೋಧನ'ಕ್ಕೆ ಮರಳಿದೆ. ಎಲ್ಲರ ಊಟ ಮುಗಿದಿತ್ತು. ಶ್ರೀಮಾತೆಯವರ ಆದೇಶದಂತೆ ನನಗಾಗಿ ಮುಚ್ಚಿ ಇಟ್ಟಿದ್ದ ಅನ್ನವನ್ನು ತೆಗೆದುಕೊಂಡು, ಮೇಲಂತಸ್ತಿಗೆ ಹೋಗಿ ಊಟ ಮಾಡಲು ಕುಳಿತೆ.

ಊಟ ಮಾಡುತ್ತ ಶ್ರೀಮಾತೆಯವರ ಬಳಿ ಆದ್ಯಂತವಾಗಿ ಎಲ್ಲವನ್ನೂ ವಿವರಿಸಿದೆ. ಎಲ್ಲವನ್ನೂ ಕೇಳಿದ ಅವರು, ''ಹಾಗಾಗದೆ ಮತ್ತೆ? ಠಾಕೂರರ ಶಿಷ್ಯ ಅವನು. ಕೆಸರು ಮೆತ್ತಿಕೊಂಡಿದ್ದ, ಅದರಿಂದ ಏನಾಯಿತು? ಅವನು ಯಾರ ಶಿಷ್ಯನೋ, ಅವರ ಮಡಿಲಿಗೆ ಸೇರಿಕೊಂಡ'' ಎಂದರು.

ಅದನ್ನು ಕೇಳಿ ನಾನೆಂದೆ: ''ನನಗೆ ತಿಳಿಯದ್ದನ್ನು ನಾನು ಒಪ್ಪಲಾರೆ.''

ಶ್ರೀಮಾತೆ (ನಗುತ್ತ): ''ಹಾಗಲ್ಲದೆ ಮತ್ತೆ ನೀನು ಅದೇನು ಹೇಳುತ್ತೀಯಾ?''

''ನಾನೇನು ನೋಡಿದೆನೋ, ಏನನ್ನು ತಿಳಿದುಕೊಂಡೆನೋ ಅದನ್ನು ಮಾತ್ರ ಹೇಳುತ್ತೇನೆ. ನನಗೆ ಗೊತ್ತು — ಅವನು ನಿಮ್ಮ ದರ್ಶನ ಪಡೆದ ಅಂತ. ಅದರಿಂದಲೇ ಅವನಿಗೆ ಇಂಥ ಪರಿವರ್ತನೆಯಾಯಿತು. ನಾನೂ ಈ ದೃಶ್ಯವನ್ನು ನೋಡಿ ಧನ್ಯನಾದೆ.''

ಒಂದು ದಿನ ಬೆಳಗಿನ ಹೊತ್ತು ಮೇಲಂತಸ್ತಿಗೆ ಹೋದಾಗ ಅಲ್ಲಿ ಶ್ರೀಮಾತೆಯವರೊಂದಿಗೆ ಗೋಲಾಪ್ ಮಾ ಇದ್ದರು. ನನ್ನನ್ನು ನೋಡಿ ಶ್ರೀಮಾತೆ ಹೇಳತೊಡಗಿದರು: ''ಗೋಲಾಪ್ ಅಸಡ್ಡೆ ಇನ್ನೂ ಹೋಗಲಿಲ್ಲ. ಇಂಥ ಅಸಡ್ಡೆಯಿಂದಾಗಿ ಎಷ್ಟು ಏಟು ಬಿದ್ದರೂ, ಮೊದಲು ಯಾವ ರೀತಿ ಅಸಡ್ಡೆಯಿತ್ತೋ ಅದೇ ಅಸಡ್ಡೆ! ಅವಳು ಹೇಳುತ್ತಾಳೆ, 'ಹುಟ್ಟುಗುಣ ಸುಟ್ಟರೂ ಹೋಗಲ್ಲ, ಪಡೆದ ಮಾನ ಒರೆಸಿದರೂ ಹೋಗಲ್ಲ' ಅಂತ. ಅಸಡ್ಡೆಯ ಕಾರಣದಿಂದ ಗಾಡಿಯಿಂದ ಉರುಳಿಬಿದ್ದು, ಹೇಗೋ ಉಳಿದುಕೊಂಡಳು.''

ನಾನು ಕೇಳಿದೆ, ''ಅದು ಯಾವಾಗ ಆಯಿತಮ್ಮಾ?'' ಅದಕ್ಕೆ ಅವರೆಂದರು, ''ನಮ್ಮ ದೊಡ್ಡ ರಸ್ತೆಯಲ್ಲಿ, ಕೇದಾರನ ಮನೆ ಬಳಿ.'' ''ಯಾವ ಕೇದಾರ? ಚಿಕ್ಕಪ್ಪ ಕೇದಾರನೆ?'' ಶ್ರೀಮಾತೆ, ''ಹೌದು, ರಸ್ತೆ ದಾಟುತ್ತಿದ್ದಳು. ಆಚೀಚೆ ನೋಡಿ, ರಸ್ತೆ ದಾಟಿ ಬಿಡಪ್ಪಾ ಅಂದರೆ, ಆಗಲ್ಲವಲ್ಲ; ಒಂದೇ ಸವನೆ ಹೋಗಿಬಿಡುತ್ತಾಳೆ! ಬೀಳುವುದಿದ್ದರೂ, ಕುದುರೆ ಗಾಡಿಯ ಮುಂದೆ ಸುಮ್ಮನೇ ಬಿದ್ದು ಬಿಡುವುದಲ್ಲ; ಮುಂದಿನ ಎರಡು ಕಾಲುಗಳನ್ನು ಎತ್ತಿ ನಿಂತಿತ್ತು ಆ ಕುದುರೆ, ಅದರ ಮುಂದೆಯೇ ಬೀಳಬೇಕೆ? ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ಕುದುರೆ ಕಾಲ ಕೆಳಗೆ ಬಿದ್ದುಬಿಡುತ್ತಿದ್ದಳು. ಥಟ್ಟನೆ ಒಬ್ಬ ಗಂಡಸು, 'ಸತ್ತಳು, ಹೆಂಗಸು ಸತ್ತೇ ಹೋದಳು' ಎನ್ನುತ್ತ ಅವಳನ್ನು ಎತ್ತಿ ಎಳೆದುಕೊಂಡು ಬಂದ. ಗೋಲಾಪ್ ಬದುಕಿ ಉಳಿದಳು.

''ಇನ್ನೊಂದು ದಿನ ನಮ್ಮ ಜಗನ್ನಾಥ ಘಾಟಿನ ಮನೆಯಲ್ಲಿ (ಗೋಲ್‌ಬಾಡಿಯ ಹತ್ತಿರ) ಇದ್ದಳು. ಅವಳ ಕೊಡವನ್ನು ನೋಡಿದ್ದೀಯಾ? ಆ ಕೊಡದೊಂದಿಗೆ ಸ್ನಾನಕ್ಕೆ ಹೋಗಿದ್ದಳು. ನೀರಿನ ಬಳಿ ಕೊಡವನ್ನಿಟ್ಟು ಸ್ನಾನ ಮಾಡತೊಡಗಿದ್ದಾಳೆ. ಅಷ್ಟರಲ್ಲಿ ನದಿಯ ಉಬ್ಬರವೆದ್ದಿದೆ. ಕೊಡ ತೇಲಿ ಹೋಗುತ್ತಿತ್ತು. ಕೊಡವೂ ತೇಲುತ್ತಿದೆ, ಅದರ ಹಿಂದೆ ಹಿಂದೆ ಗೋಲಾಪ್ ಕೂಡಾ ಹೋಗುತ್ತಿದ್ದಾಳೆ. ಜನ ಅದನ್ನು ನೋಡಿ ನಗತೊಡಗಿದರು. ಕೊನೆಗೊಬ್ಬಾತ ಆ ಕೊಡವನ್ನು ಹಿಡಿದುಕೊಟ್ಟ.

''ಅದಕ್ಕೇ ಅವಳಿಗೆ ಹೇಳಿದೆ, ಪ್ರಪಂಚದಲ್ಲಿ ಬದುಕಿರಬೇಕಾದರೆ ಎಲ್ಲ ತಿಳಿದುಕೊಂಡು ನಡೆಯಬೇಕು ಅಂತ. ಅಜಾಗರೂಕತೆಯನ್ನು ಬಿಟ್ಟುಬಿಡಬೇಕು. ಎಚ್ಚರಿಕೆಯಿಂದಿರಬೇಕು. ಹಾಗಿದ್ದರೆ ಮಾತ್ರ ಜನರ ಮಧ್ಯೆ ಇದ್ದುಕೊಂಡು ಜೀವಿಸಬಹುದು. ನನ್ನ ಬಳಿ ಬಂದು ಅಯ್ಯೋ ಎಂದು ಅತ್ತರೆ ಏನು ಪ್ರಯೋಜನ?''

ಗೋಲಾಪ್ ಮಾ-ಗೆ ಏನಾಯಿತೋ ನನಗೆ ಸ್ವಲ್ಪವೂ ಅರ್ಥವಾಗಲಿಲ್ಲ, ಶ್ರೀಮಾತೆಯವರ ಉಪದೇಶವನ್ನು ಮಾತ್ರ ಕೇಳಿದೆ.

ಶ್ರೀಮಾತೆ ಕಲ್ಕತ್ತೆಗೆ ಬಂದು ಹಲವು ದಿನಗಳೇ ಕಳೆದಿದ್ದವು. ಈಗ ಅವರು ತಕ್ಷಣವೇ ಜಯರಾಮಬಾಟಿಗೆ ಹೋಗುವ ಬಯಕೆಯನ್ನು ವ್ಯಕ್ತಪಡಿಸಿದರು. ನಡುನಡುವೆ ಅಲ್ಲಿಗೆ ಹೊರಡುವ ಮಾತುಕತೆ ನಡೆಯುತ್ತಿತ್ತು. ಒಂದು ದಿನ ಬೆಳಿಗ್ಗೆ ಕೇಳಿದರು, ''ಬೇಲೂರು ಮಠದಲ್ಲಿ ಈಗ ಯಾರು ಪೂಜೆ ಮಾಡುತ್ತಿದ್ದಾರೆ?''

''ಬಾಬುರಾಮ ಮಹಾರಾಜ್'' ಎಂದು ನಾನು ಉತ್ತರ ಕೊಟ್ಟೆ. ಅವರನ್ನು ಕರೆದುಕೊಂಡು ಬರಲು ಶ್ರೀಮಾತೆ ತಿಳಿಸಿದಾಗ, ಗಣೇಂದ್ರನಾಥ ಅವರನ್ನು ಕರೆದುಕೊಂಡು ಬಂದ. ಬಾಬುರಾಮ ಮಹಾರಾಜರ ಕೈಗೆ ಶ್ರೀರಾಮಕೃಷ್ಣರ ಕವಚ ಇತ್ಯಾದಿಗಳನ್ನು ಕೊಟ್ಟು, ಅವುಗಳಿಗೆ ನಿತ್ಯವೂ ಪೂಜೆ ಮಾಡಲು ಅವರು ಆದೇಶವಿತ್ತರು. ಬಾಬುರಾಮ ಮಹಾರಾಜ್ ಕೂಡಲೇ ಒಂದು ದೋಣಿಯನ್ನು ಬಾಡಿಗೆಗೆ ಗೊತ್ತುಮಾಡಿ, ಅವುಗಳನ್ನು ಬೇಲೂರು ಮಠಕ್ಕೆ ತೆಗೆದುಕೊಂಡು ಹೋದರು. ಅವರು ಹೋದ ಮೇಲೆ ಶ್ರೀಮಾತೆ ಹೇಳಿದರು, ''ಠಾಕೂರರ ಕವಚ ಮೊದಲಾದವು ಇಷ್ಟು ದಿನ ನನ್ನ ಬಳಿಯಿದ್ದವು. ಈಗ ಅದನ್ನು ಬೇಲೂರು ಮಠಕ್ಕೆ ಕೊಟ್ಟುಬಿಟ್ಟೆ. ಶರೀರಕ್ಕೆ ಒಳ್ಳೆಯದು, ಕೆಟ್ಟದ್ದು ಎರಡೂ ಇವೆ; ಯಾವಾಗ ಏನಾಗುತ್ತದೋ ಹೇಳಲಾಗದು. ಬಹುಶಃ ಜ್ವರ ಹಿಡಿದು ಮಲಗುತ್ತೇನೆ, ಚೈತನ್ಯವೇ ಇಲ್ಲ— ಯಾರೋ ಸಮಯ ನೋಡಿಕೊಂಡು ಕದ್ದುಕೊಂಡು ಹೋಗಿಬಿಡಬಹುದು. ಹಳ್ಳಿಯಲ್ಲಂತೂ ನೋಡಿದ್ದೀಯಲ್ಲ, ಯಾರನ್ನೂ ನಂಬುವಂತಿಲ್ಲ.''

ಕೊನೆಗೂ ಶ್ರೀಮಾತೆ ಜಯರಾಮಬಾಟಿಗೆ ಹೊರಡುವ ದಿನ ನಿಶ್ಚಯವಾಯಿತು. ಈ ಬಾರಿ ವಿಷ್ಣುಪುರ ಮೂಲಕ ಹೊಸ ಮಾರ್ಗವಾಗಿ ಹೋಗಲಿದ್ದಾರೆ. ಈ ಮಾರ್ಗವಾಗಿ ಹೋದರೆ ಜಯರಾಮಬಾಟಿಗೆ ಸಮೀಪದ ಆಮೋದರ ನದಿ ಬಿಟ್ಟರೆ ಬೇರೆ ಯಾವ ನದಿಯನ್ನೂ ದಾಟಬೇಕಿಲ್ಲ. ಒಂದು ಸಲ ಮಾತ್ರ ಪುರಿಯಿಂದ ಅಜ್ಜಿ ಮೊದಲಾದವರನ್ನು ಮರಳಿ ಕರೆತರುವಾಗ ಈ ಮಾರ್ಗವಾಗಿ ಹೋಗಿದ್ದೆ. ಆದರೆ ಆಗ ನಾನೊಬ್ಬನೇ ಹೋಗಿದ್ದೆ; ಬೇರೆಲ್ಲೂ ತಂಗದೆ ವಿಷ್ಣುಪುರ ಮೂಲಕವಾಗಿ ಕೊತುಲ್‌ಪುರದವರೆಗೆ ಹೋಗಿದ್ದೆ. ಆದರೆ ಈಗ ಶ್ರೀಮಾತೆಯವರನ್ನು ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಹೋಟೆಲಲ್ಲಿ ಆಹಾರ, ಎತ್ತಿನ ಗಾಡಿ ಮೊದಲಾದವುಗಳ ವ್ಯವಸ್ಥೆಯನ್ನು ಮೊದಲೇ ಮಾಡಬೇಕಿತ್ತು. ಈ ಕಾರಣದಿಂದ ಅವರು ಪ್ರಯಾಣ ಮಾಡುವ ಹಿಂದಿನ ದಿನ ನಾನೊಬ್ಬನೇ ರಾತ್ರಿಯ ಗಾಡಿಯಲ್ಲಿ ಅಲ್ಲಿಗೆ ಹೊರಟೆ. ಹೊರಡುವ ಮುನ್ನ ಯೋಗಿನ್‌ಮಾ ಸಂಬಂಧಿಯಾಗಿದ್ದ ಡಿಟೆಕ್ಟಿವ್ ಇನ್‌ಸ್ಪೆಕ್ಟರ್ ಶಶಿಭೂಷಣ ಡೇ ಅವರ ಎರಡು ಪತ್ರಗಳನ್ನು ಒಯ್ದಿದ್ದೆ— ಒಂದು, ವಿಷ್ಣುಪುರ ಪೋಲಿಸ್ ಠಾಣೆಗೆ, ಇನ್ನೊಂದು ಕೊತುಲ್‌ಪುರ ಠಾಣೆಗೆ.

ಮರುದಿನ ವಿಷ್ಣುಪುರ ತಲುಪಿ, ಇನ್‌ಸ್ಪೆಕ್ಟರರ ಸಹಾಯದಿಂದ ಹೋಟೆಲು, ಅಡಿಗೆಯವನು ಹಾಗೂ ಎತ್ತಿನಗಾಡಿ ಇವುಗಳ ವ್ಯವಸ್ಥೆಯನ್ನು ಮಾಡಿದೆ. ಹೋಟೆಲನ್ನು ಸ್ವಚ್ಛಗೊಳಿಸಿ, ಶ್ರೀಮಾತೆಯವರು ಠಾಕೂರರ ಪೂಜೆ ಮಾಡುವ ಸಲುವಾಗಿ ಸಿದ್ಧಗೊಳಿಸಲಾಯಿತು. ಅವರ ಸ್ನಾನಕ್ಕೆ ನೀರು, ಆಹಾರ ಇತ್ಯಾದಿಗಳಿಗೆ ವ್ಯವಸ್ಥೆ ಮಾಡಿದ್ದಾಯಿತು. ಹನ್ನೆರಡು ಗಂಟೆಯ ಹೊತ್ತಿಗೆ ಗಾಡಿಗಳೊಂದಿಗೆ ರೈಲ್ವೇ ಸ್ಟೇಷನ್ನಿಗೆ ಬಂದೆ.

ಮೊದಲೇ ವ್ಯವಸ್ಥೆ ಮಾಡಿದ್ದಂತೆ ಕೃಷ್ಣಲಾಲ್ ಹಾಗೂ ಗಣೇಂದ್ರನಾಥ ಶ್ರೀಮಾತೆಯವರನ್ನು ಕರೆದುಕೊಂಡು ಬೆಳಗಿನ ರೈಲುಗಾಡಿಯಲ್ಲಿ ಹೊರಟು ಬಂದಿದ್ದರು. ಒಂದೂವರೆ ಗಂಟೆಯ ಹೊತ್ತಿಗೆ ಅಲ್ಲಿಗೆ ತಲುಪಿದ್ದರು. *(ಮುಂದುವರಿಯುವುದು)*



## ''ಬೇರೆ ಕಡೆ ನೀನು ಸಾಧಿಸಬೇಕಾದ ಕೆಲಸ ಬಹಳ ಇದೆ''

ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾಗಿದ್ದಾಗ ಒಬ್ಬ ಯುವಕ ಸಂನ್ಯಾಸಿಯಾಗಲು ಆಶ್ರಮಕ್ಕೆ ಬಂದು ಸೇರಿಕೊಂಡ. ಅವನಲ್ಲಿ ಜೀವನದ ಬಗ್ಗೆ ಅನೇಕ ಪ್ರಶ್ನೆಗಳಿದ್ದವು. ಆದರೆ ಸ್ವಾಮೀಜಿ ಅವನನ್ನು ಕರೆದು, ''ಈ ಜೀವನದಲ್ಲಿ ನೀನು ಬೇರೆ ಕಡೆ ಸಾಧಿಸಬೇಕಾದ ಕೆಲಸ ಬಹಳ ಇದೆ'' ಎಂದು ಹೇಳಿ ಹಿಂದಕ್ಕೆ ಕಳುಹಿಸಿದರು. ಅದಾಗಿ ಅನೇಕ ದಶಕಗಳೇ ಕಳೆದವು. ಸ್ವಾಮೀಜಿ ನುಡಿದ ಮಾತುಗಳು ಸುಳ್ಳಾಗಲಿಲ್ಲ. ಆ ಯುವಕನ ಮಾರ್ಗ ಬದಲಾಯಿತು, ಆತ ಬೇರೆ ಕಡೆ ಮಹತ್ವದ ಕಾರ್ಯ ನಿರ್ವಹಿಸತೊಡಗಿದ. ಗುಜರಾತಿನ ಸೀಮಿತ ವಲಯದಿಂದ ಆತ ಇಡೀ ದೇಶದ ಬೃಹತ್ತಾದ ಕಾರ್ಯಕ್ಷೇತ್ರಕ್ಕೆ ಬಂದ. ಆ ಯುವಕನೇ ನರೇಂದ್ರ ಮೋದಿ. ಗುಜರಾತಿನ ಮುಖ್ಯಮಂತ್ರಿಯಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಈಗ ಅವರು ಭಾರತದ ಪ್ರಧಾನ ಮಂತ್ರಿಯಾಗಿದ್ದಾರೆ. ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗುವ ಮುನ್ನ ಅವರು ಬೇಲೂರು ಮಠಕ್ಕೆ ಬಂದು, ಸ್ವಾಮಿ ಆತ್ಮಸ್ಥಾನಂದರನ್ನು ಭೇಟಿಯಾಗಿದ್ದರು. ಆ ಭೇಟಿ ಗುರು-ಶಿಷ್ಯರ ಆತ್ಮೀಯ ಭೇಟಿಯಂತಿತ್ತು. ಆಗ ಶ್ರೀ ನರೇಂದ್ರ ಮೋದಿ ಹೇಳಿದರು: ''ಮುಂದೆ ನಾನೇನೇ ಆಗುವುದಿದ್ದರೂ ಅದಕ್ಕೆಲ್ಲ ನೀವೇ ಕಾರಣ. ಏಕೆಂದರೆ, ಅಂದೊಮ್ಮೆ ನೀವು ನನ್ನನ್ನು ಹಿಂದಕ್ಕೆ ಕಳುಹಿಸದೆ ಇರುತ್ತಿದ್ದರೆ ನಾನು ಈ ಹಾದಿಯನ್ನು ತುಳಿಯುತ್ತಿರಲಿಲ್ಲ.''

ಸ್ವಾಮೀಜಿ ಮಹಾಸಮಾಧಿ ಹೊಂದಿದಾಗ ಶ್ರೀ ಮೋದಿಯವರು ಶ್ರದ್ಧಾಂಜಲಿ ಸೂಚಿಸುತ್ತ, ''ಅವರ ಸಮಾಧಿಯಿಂದಾಗಿ ನನಗೆ ವೈಯಕ್ತಿಕ ನಷ್ಟವುಂಟಾಗಿದೆ'' ಎಂದರು. *(ಸಂಗ್ರಹ: 'ಸ್ವಾಮಿ ಆತ್ಮಸ್ಥಾನಂದ' ಸಂಕ್ಷಿಪ್ತ ಜೀವನ ಚರಿತ್ರೆ)*